ಎಂಬುವವರು ೨,೦೧೨ ರೂಪಾಯಿಗಳ ಅವ್ಯವಹಾರವನ್ನು ಮಾಡಿದ್ದಾರೆ. ಈ ರೀತಿ ಬ್ಯಾಂಕಿನಲ್ಲಿ ಅವ್ಯವಹಾರ ಮಾಡಿದ ಕಾರಣದಿಂದಾಗಿ ಅವರನ್ನು ಸೇವೆಯಿಂದ ಡಿಸ್‌ಮಿಸ್ ಮಾಡಲಾಗಿದೆ. ಮತ್ತೆ ಅವರನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದರೆ ಹೇಗೆ? ಆದ್ದರಿಂದ ಅಂಥವರಿಗೆ ರಕ್ಷಣೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ ಎನ್ನುವ ಮಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ನಾನು ಅವರನ್ನು ಯಾವಾಗಲೂ ಕೂಡ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಹೇಳಲಿಲ್ಲ. ಆದರೆ ಕಾನೂನು ಪ್ರಕಾರ ಅವರನ್ನು ಡಿಸ್‌ಮಿಸ್ ಮಾಡಿಲ್ಲ. ಬರೀ ಟರ್ಮಿನೇಷನ್ ಎಂದು ಮಾತ್ರ ಮಾಡಿದ್ದಾರೆ. ಇದು ಯಾವ ಕಾನೂನಿನಲ್ಲಿ ಇದೆ? ಇದು ಯಾವ ಸಂವಿಧಾನದಲ್ಲಿ ಇದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಿದರೆ ಒಳ್ಳೆಯದು.

ಶ್ರೀ ಆರ್. ಜಾಲಪ್ಪ.—ಸ್ವಾಮಿ ನಾವು ಬ್ಯಾಂಕಿನ ಬೈಲಾ ಪ್ರಕಾರ ಆ ರೀತಿಯ ಕ್ರಮವನ್ನು ಅವರ ಮೇಲೆ ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಕೆ. ಕಾಂತ.—ಸ್ವಾಮಿ, ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು.— ತಾವು ಮಂತ್ರಿಗಳ ಜೊತೆಯಲ್ಲಿ ಮಾತನಾಡಿ.

ಶ್ರೀ ಆರ್. ಎಲ್. ಜಾಲಪ್ಪ.— ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಕ್ಲಾಸ್–೩ ಮತ್ತು ಕ್ಲಾಸ್–೪ಗೆ ಬರುತ್ತದೆ. ಕ್ಲಾಸ್–೧ ಮತ್ತು ಕ್ಲಾಸ್–೨ಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಪ್ರಿವಿಲೇಜ್‌ಮೋಷನ್ ಅನ್ನು ಇಪತ್ತು ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಮೈಸೂರಿನ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಕ್ಕೆ ತಯಾರಾಗಿದ್ದಾರೆ. ತಾವು ಕೂಡ ಇವತ್ತು ಅದರ ಬಗ್ಗೆ ಉತ್ತರ ಕೊಡಲಾಗುತ್ತದೆಂದು ಹೇಳಿದ್ದೀರಿ.

ಅಧ್ಯಕ್ಷರು.— ತಮಗೆ ಅವಕಾಶವಿದೆ ಆಗ ಹೇಳಿ.

VII) ಮುಖ್ಯಮಂತ್ರಿಯವರು ಮೇಲ್ಮನೆಯಲ್ಲಿ ಮಾಡಿದ ಹೇಳಿಕೆಯ ಕುರಿತಂ ಹಕ್ಕುಬಾಧ್ಯತಾ ನಿರ್ಣಯ ಮಂಡಿಸಲು ಅನುಮತಿ ಕೊಡುವ ಬಗ್ಗೆ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಹಕ್ಕುಬಾಧ್ಯತಾ ನಿರ್ಣಯವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ವಿಚಾರ ಇಷ್ಟೆ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಸರ್ಕಾರದ ಪರವಾಗಿ ಮಾತನಾಡತಕ್ಕ ಸಂದರ್ಭದಲ್ಲಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದು ಈ ಸದನದ ಸದಸ್ಯರಾಗಿರತಕ್ಕ ಮಾನ್ಯ ಉಗ್ರನರಸಿಂಹಪ್ಪನವರ ವಿಚಾರದ ಮೇಲೆ ಚರ್ಚೆಯಾಗುತ್ತಿದ್ದಾಗ ಅವರು ಹೇಳಿರತಕ್ಕ ಮಾತು. ನಾನು ಎಲ್ಲಾ ವಿವರಗಳಿಗೆ ಹೋಗುವುದಿಲ್ಲ, ನಿಯಮಗಳ ಪ್ರತಿಬಂಧಕಗಳು ಇವೆ. ಆ ಮನೆಯಲ್ಲಿ ಹೇಳಿದ ಮಾತನ್ನು ಈ ಮನೆಯಲ್ಲಿ ಗಣನೆಗೆ ತೆಗೆದುಕೊಳ್ಳುವುದು ಕಷ್ಟವಾಗಬಹುದು. ಅದರ ಬಗ್ಗೆ ಚರ್ಚೆ ಬರುವುದಕ್ಕೆ ಸಾಧ್ಯತೆಯಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಮೇಲ್ಮನೆಯಲ್ಲಿ ನಡೆಯತಕ್ಕ ಚರ್ಚೆಯು ಕಾರ್ಯಕಲಾಪದ ಸಂದರ್ಭದಲ್ಲಿ ಅಂದರೆ ಈ ಮನೆಯ ಸದಸ್ಯರ ಬಗ್ಗೆ ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ, ವಿರೋಧಪಕ್ಷದವರು ಪೋಲೀಸ್ ಇಲಾಖೆಯನ್ನು ನೀವು ನಿಮ್ಮ ರಾಜಕೀಯಕ್ಕೆ ದುರುಪಯೋಗಪಡಿಸಿಕೊಂಡಿದ್ದೀರಿ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಚರ್ಚೆ ಯಾವುದೇ ಮಟ್ಟಕ್ಕೆ ಹೋಗಿರಲಿ, ರಾಜ್ಯದ ಮುಖ್ಯಮಂತ್ರಿಗಳಾಗಿ ಉತ್ತರ ಹೇಳತಕ್ಕ ಕಾಲದಲ್ಲಿ ಮುಖ್ಯಮಂತ್ರಿಗಳು ಕೆಲವು ಮಾತುಗಳನ್ನು ಹೇಳಿದ್ದಾರೆ. ಇದು ನಮ್ಮ ಮುಂದೆ ಇರತಕ್ಕ ಪ್ರಶ್ನೆ. ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿರತಕ್ಕ ಮಾತು ಏನೆಂದರೆ, 'ತೋರಿಸಲೇನು ಪೋಲೀಸ್ ರಾಜ್ಯದ ರುಚಿಯನ್ನು' ಎಂದು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಆ ಮನೆಯಲ್ಲಿ ಮಾತನಾಡಿದ ವಿಚಾರವನ್ನು ಈ ಮನೆಯಲ್ಲಿ ಚರ್ಚೆಗೆ ಎತ್ತಿಕೊಳ್ಳಬಹುದೆ? ಆ ಸದನದಲ್ಲಿ ಮಾತನಾಡಿದ ವಿಷಯವನ್ನು ಈ ಸದನದಲ್ಲಿ ಚರ್ಚಿಸ ಬಹುದೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ.— ನೀವು ಹೇಳುವ ಮಾತನ್ನು ನಾನು ಆಗಲೇ ಹೇಳಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ತಾವು ವಿವರಗಳನ್ನು ಹೇಳುವ ಅವಶ್ಯಕತೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.— ವಿವರಗಳನ್ನು ನಾನೇನು ಹೇಳುತ್ತಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರು ಮಂತ್ರಿಗಳು ಮಾತನಾಡಿದ ಮಾತನ್ನು ಇಲ್ಲಿ ಉಲ್ಲೇಖ ಮಾಡಲಿಕ್ಕೆ ಬರುವುದಿಲ್ಲ. ಇದು ನನ್ನ ಕ್ರಿಯಾಲೋಪ.

ಶ್ರೀ ಎ. ಲಕ್ಷ್ಮೀಸಾಗರ್.— ಅಧ್ಯಕ್ಷರೇ, ಆ ಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಸರಿಯೇ ಅಥವಾ ಇಲ್ಲವೇ ಎಂಬುದು ಸಭೆಯ ಸೇವಾ ನಿಯಮಾವಳಿಯಲ್ಲಿದೆ. ನಿಯಮಾವಳಿಯಲ್ಲಿ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ನಿಯಮಾವಳಿಯನ್ನು ಪಾಲನೆ ಮಾಡ ತಕ್ಕದ್ದು ಈ ಸಭೆಯ ಸಂಪ್ರದಾಯಕ. ಹಿಂದಿನಿಂದಲೂ ಅದೇರೀತಿ ನಡೆದುಕೊಂಡು ಬಂದಿದೆ. ಆ ವಿಷಯ ವನ್ನು ಪ್ರಸ್ತಾಪ ಮಾಡುವುದು ಸಮಂಜಸವೆ ಎನ್ನುವುದನ್ನು ಮಾನ್ಯ ಸದಸ್ಯರು ವಿಚಾರ ಮಾಡಬೇಕು. ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ. ಈಗ ಪತ್ರಿಕೆಗಳಲ್ಲಿ ಏನೇನು ವರದಿಯಾಗಿದೆ, ಅಲ್ಲಿ ಏನೇನು ನಡೆಯಿತು ಎಲ್ಲವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋದರೆ, ಈ ಸಭೆಯ ಕಾರ್ಯ ಕಲಾಪಗಳಿಗೆ ತೊಂದರೆಯಾಗುತ್ತದೆ. ಅಲ್ಲಿ ಏನು ನಡೆಯಿತು, ಏನು ನಡೆಯುತ್ತಾ ಇದೆ. ಪತ್ರಿಕೆಯಲ್ಲಿ ಯಾವರೀತಿ ವರದಿಯಾಗಿದೆ ಎಲ್ಲವನ್ನು ಹೇಳುತ್ತಾ ಹೋದರೆ ಜಿಜ್ಞಾಸೆಯುಂಟಾಗಿ ಸಭೆಯ ಕಾರ್ಯ ಕಲಾಪ ನಡೆಸುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಸಹಕಾರ ಮನೋಭಾವದಿಂದ ಸಭೆಯ ನಿಯಮಾವಳಿಗಳನ್ನು ತೀಪ್ರವಾಗಿ ಗಮನದಲ್ಲಿಟ್ಟು ನಿಯಮಗಳ ವ್ಯಾಪ್ತಿಯೊಳಗೆ ಕೆಲಸ ಮಾಡತಕ್ಕ ಒಂದು ತೀರ್ಮಾನಕ್ಕೆ ಬರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ನಾನು ಆದಿಕ್ಕೂ ಸ್ಕರ ನಿಯಮಗಳನ್ನು ಗಮನದಲ್ಲಿಟ್ಟು, ನಿಯಮ ಗಳ ಸಂಖ್ಯೆಯನ್ನು ಪ್ರಸ್ತಾಪ ಮಾಡದೇ ಇದ್ದರೂ ನಿಯಮಗಳ ವ್ಯಾಪ್ತಿಯೊಳಗೆ ಪ್ರಸ್ತಾಪ ಮಾಡು ತ್ತಿದ್ದೇನೆ.

ಅಧ್ಯಕ್ಷರು.— ನಿಯಮವನ್ನು ನಾವೊಂದು ಸಾರಿ ಓದಿಕೊಳ್ಳೋಣ. For the information of the hon. Member, Rule 312 says:

> "No speech made in the Council shall be quoted in the House unless it is a definite statment of policy by a Minister" It is not a statement of policy of the Government. "Provided that the Speaker on a request being made to him in advance give permission to a member to quote a speech to make reference to the proceedings in the Council if the Speaker thinks that such a course is necessary in order to enable the member to develop a point of privilege or procedure."

ಶ್ರೀ ಎಸ್. ಭೀಮಣ್ಣ ಖಂಡ್ರೆ.— ತಾವು ಏನು ಓದಿದ್ದೀರಿ ಅದರ ಬಗ್ಗೆ ಹೇಳುತ್ತಿದ್ದೇನೆ. "unless it is a definite statement of policy" ಎಂದು ಇದೆ. ಪಾಲಿಸಿಯ ಬಗ್ಗೆ ರೆಫರ್ ಮಾಡುತ್ತಿದ್ದೇನೆ.

MR. SPEAKER.— That does not amount to a policy.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ನೀವೇ ಪ್ರಸ್ತಾಪ ಮಾಡಿದ್ದೀರಿ. ನಿಯಮ ೩೧೨ ಏನು ಇದೆ ಅದನ್ನು ನಾನು ನೋಡಿದ್ದೇನೆ. ಆದ್ದರಿಂದ ನಿಯಮ ೩೧೨ರ ಪ್ರಕಾರ ಕ್ರಿಯಾಲೋಪ ಅಥವಾ ತಕರಾರು ಬರಬಹುದೆಂದು ನಿರೀಕ್ಷೆ ಮಾಡಿದ್ದೆ. ನಿಯಮದ ಸಂಖ್ಯೆಯನ್ನು ಪ್ರಸ್ತಾಪ ಮಾಡ

ದಿದ್ದರೂ ಆದರ ಅರ್ಥವನ್ನು ನಾನು ಪೂರ್ವಭಾವಿಯಾಗಿ ಪ್ರಸ್ತಾಪ ಮಾಡಿದ್ದೇನೆ. ನನ್ನ ನಿರೀಕ್ಷೆ ಪ್ರಕಾರ ಸಚಿವದ್ವಯರು ಅದನ್ನು ಪ್ರಸ್ತಾಪ ಮಾಡಿದ್ದಾರೆ. ಆ ಸದನದಲ್ಲಿ ನಡೆದಿರತಕ್ಕ ಕಾರ್ಯಕಲಾಪಗಳ ವಿಷಯಕ್ಕೆ ನಾನು ಹೋಗುವುದಿಲ್ಲ. ಈ ಸದನದಲ್ಲಿ ನೀವು ಉತ್ತರಿಸುವುದಕ್ಕೆ ನಾವು ಪ್ರಸ್ತಾಪ ಮಾಡುವುದಕ್ಕೆ ಹಕ್ಕು ಇದೆ. ''Unless it is a statement pertaining to the policy of the Government'' ಎಂದು ಇದೆ. ಇದರಲ್ಲಿ unless ಎನ್ನುವ ಪದ ಇಲ್ಲದಿದ್ದರೆ ನಾನು ಮಾತನಾಡುವಹಾಗೆ ಇರಲಿಲ್ಲ. That is added to this rule 312. ಅದನ್ನು ಸೇರಿಸಿ ಇಟ್ಟಿದ್ದಾರೆ. ಆ ಸದನದಲ್ಲಿ ಮುಖ್ಯಮಂತ್ರಿಗಳು ಹೇಳಿರತಕ್ಕ ಮಾತು, ಮಂತ್ರಿಗಳಾಗಲೀ ಮುಖ್ಯಮಂತ್ರಿಗಳಾಗಲಿ ಯಾರೇ ಇರಬಹುದು ಸರ್ಕಾರದ ನೀತಿಯ ಪ್ರಶ್ನೆಯನ್ನು ಬಿಟ್ಟು ಬೇರೆ ವಿಚಾರವೇನಾದರೂ ಅವರು ಹೇಳಿದ್ದರೆ ನನ್ನ ಆಭ್ಯಂತರವಿರಲಿಲ್ಲ. ಆದರೆ ಆದರಲ್ಲೂ ಮುಖ್ಯಮಂತ್ರಿಗಳಾಗಿ ಹೇಳಿಕೆ ಕೊಡತಕ್ಕ ಸಂದರ್ಭದಲ್ಲಿ ಸರ್ಕಾರದ ನೀತಿಯನ್ನು ಹೇಳುವಾಗ ಕೆಲವೊಂದು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. 'ನಾವು ಪೋಲೀಸ್ ರಾಜ್ಯದ ರುಚಿಯನ್ನು ತೋರಿಸುತ್ತೇವೆ' ಎನ್ನುವ ಮಾತನ್ನು ಮುಖ್ಯಮಂತ್ರಿಗಳು ಹೇಳಿರುವುದರಿಂದ ಸರ್ಕಾರದ ನೀತಿ ಎರಡು ವಿಧವಾಗಿ ಬರುತ್ತದೆ. ಸರ್ಕಾರ ಒಂದು ತೀರ್ಮಾನವನ್ನು ಮಂತ್ರಿಮಂಡಲದಲ್ಲಿ ಚರ್ಚೆ ಮಾಡಿ ಅದನ್ನು ಜಾರಿಗೆ ಕೊಡುವುದರ ಮೂಲಕ ಅದೊಂದು ಸರ್ಕಾರದ ನೀತಿಯಾಗುತ್ತದೆ. ಸರ್ಕಾರದ ಪಾಲಿಸಿಯಾಗುತ್ತದೆ ಅದು ಸ್ಟೇಟ್‌ಮೆಂಟ್ ಆಫ್ ದಿ ಗೌರ್ನಮೆಂಟ್ ಬರತಕ್ಕದ್ದು ಸಾಧ್ಯವಿದೆ. ಕೆಲವೊಮ್ಮೆ ಮಂತ್ರಿಮಂಡಲದಲ್ಲಿ ತೀರ್ಮಾನವಾದ ಸರ್ಕಾರದ ತೀರ್ಮಾನವನ್ನು ಮುಖ್ಯಮಂತ್ರಿಗಳ ಪರವಾಗಿ ಮತ್ತೊಬ್ಬ ಮಾನ್ಯ ಸಚಿವರು ಈ ಸದನದಲ್ಲಿ ಆಗಬಹುದು, ಆ ಸದನದಲ್ಲಿ ಆಗಬಹುದು ಅದರ ಬಗ್ಗೆ ಹೇಳಿಕೆಯನ್ನು ಕೊಟ್ಟರೆ ಅದನ್ನು ನಾವೆಂದೂ ವಿರೋಧ ಮಾಡಿಲ್ಲ. ನೀತಿಯ ಬಗ್ಗೆ ಮಂತ್ರಿಮಂಡಲದಲ್ಲಿ ತೀರ್ಮಾನ ಆಗದೇ ಇದ್ದರೂ ಅದನ್ನು ಸದನದಲ್ಲಿ ಪ್ರಕಟಣೆ ಮಾಡಿರತಕ್ಕ ಅನೇಕ ಉದಾಹರಣೆಗಳು ಶಾಸಕಾಂಗದ ಇತಿಹಾಸದಲ್ಲಿ ಸಿಗುತ್ತವೆ ಆದ್ದರಿಂದ ಇರಬಹುದು, ಚರ್ಚೆಯ ಮಟ್ಟ, ಅದರ ಬಿಸಿ ಕಾವು ಹೆಚ್ಚಿನ ಎತ್ತರವನ್ನು ಮುಟ್ಟಿರಬಹುದು. ಈ ಸದನದಲ್ಲಿ ನಾನು ಅದರ ಗೊಡವೆಗೆ ಹೋಗುವುದಿಲ್ಲ. ಆದರೆ ಮುಖ್ಯಮಂತ್ರಿಯಾಗಿ ಆದರಲ್ಲೂ ಕೂಡ ಪೋಲೀಸ್ ಇಲಾಖೆಯನ್ನು ತಮ್ಮ ವಶದಲ್ಲಿ ಹೊಂದಿರತಕ್ಕಂಥವರು ಇಂತಹ ಮಾತನ್ನು ಆಡಿದರೆ ಅದರ ಪರಿಣಾಮ ಏನಾಗಬಹುದು ? ಹಿಂದೆ ನಡೆದಿರಬಹುದು. ''ನಿಮ್ಮ ಸರ್ಕಾರ ಇದ್ದಾಗ ತೊಂದರೆ ಕೊಟ್ಟಿದ್ದೀರಿ'' ಎನ್ನುವ ಮಾತನ್ನು ಅವರು ಆಡಿದ್ದಾರೆ. ನಾನು ಇದರ ವಿವರಕ್ಕೆ ಹೋಗುವುದಿಲ್ಲ. ಆದರೆ, ಇದರ ಹಿನ್ನೆಲೆಯಲ್ಲಿ, ಗೃಹಖಾತೆಯನ್ನು ಹೊಂದಿರತಕ್ಕ ಮುಖ್ಯಮಂತ್ರಿಗಳು ಈ ಹೇಳಿಕೆಯನ್ನು ಕೊಡುವುದರಿಂದ ಪೋಲೀಸ್ ಇಲಾಖೆಯ ಮೇಲೆ ಏನು ಪರಿಣಾಮ ಆದೀತು ? ಇಂತಹ ಹೇಳಿಕೆಯಿಂದ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಜನತೆಯ ಮೇಲೆ, ವಿರೋಧ ಪಕ್ಷಗಳ ಮೇಲೆ ಏನು ಪರಿಣಾಮವಾಗಬಹುದು ಎನ್ನುವ ಜವಾಬ್ದಾರಿಯನ್ನು ಇಟ್ಟುಕೊಂಡು ಯಾವುದೇ ಒಂದು ಮಾತನ್ನು ಆಡಬೇಕಾಗುತ್ತದೆ. ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನವಾಗದೇ ಇದ್ದರೂ ಕೂಡ ಮುಖ್ಯಮಂತ್ರಿಗಳ ಈ ಮಾತಿನಿಂದಾಗಿ, ಮಂತ್ರಿಮಂಡಲದ ತೀರ್ಮಾನದಿಂದ ಇದರ ಫಲಿತಾಂಶ ಎಷ್ಟು ಬರುತ್ತದೆಯೋ, ಅಷ್ಟೇ ಫಲಿತಾಂಶ ಮುಖ್ಯಮಂತ್ರಿಗಳ ಹೇಳಿಕೆಯಿಂದ ಸ್ಪಷ್ಟವಾಗಿ ಬರುತ್ತದೆ. ಅವರು ಮಾಡಿದ ಹೇಳಿಕೆ ಸದನದ ಒಳಗಡೆ ಇರಬಹುದು ಅಥವಾ ಸದನದ ಹೊರಗಡೆ ಇರಬಹುದು. ಆದ್ದರಿಂದ ನನ್ನ ಅನಿಸಿಕೆ ಏನೆಂದರೆ ಇದರಿಂದಾಗಿ ಇದು ಈ ಸರ್ಕಾರದ ನೀತಿಯ ಪ್ರಶ್ನೆಯಾಗಿ ಬರುತ್ತದೆ. 'ತೋರಿಸಲೇ ಪೋಲೀಸ್ ರಾಜ್ಯದ ರುಚಿಯನ್ನು ?' ಎನ್ನುವ ಮಾತಿನಿಂದಾಗ ಶಾಸನ ಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರಿರಬಹುದು ಇಲ್ಲಿಯ ಸದಸ್ಯರಿರಬಹುದು ಮತ್ತು ಸಾಮಾನ್ಯ ಜನರೇ ಇರಬಹುದು, ಇವರ ಮೇಲೆ ಬೇರೆಯೇ ರೀತಿಯಾದ ಪರಿಣಾಮ ಬರುವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ತಪ್ಪು ಸರಿ ವಿವರಕ್ಕೆ ನಾನು ಹೋಗುವುದಿಲ್ಲ. ಆದರೆ ತಮ್ಮ ಪೋಲೀಸ್ ಇಲಾಖೆಯನ್ನು ಬಳಸಿ ಆದರ ರುಚಿಯನ್ನು ತೋರಿಸುತ್ತೇನೆ ಎನ್ನತಕ್ಕಂಥ ಮಾತನ್ನು ಆಡಿರಬೇಕಾದರೆ ಸಾರ್ವಜನಿಕರು ಒತ್ತಟ್ಟಿಗೆ ಇರಲಿ, ಶಾಸನ ಸಭಾಧ್ಯಕ್ಷರ ಹಕ್ಕು ಮೊಟಕಾಗುತ್ತದೆ. ಈ ಮನೆಯ ಸದಸ್ಯನಾಗಿ ನಾನು ಮೇಲ್ಮನೆಯ ಸದಸ್ಯರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಕೂಡ ಇದರ ಬಗ್ಗೆ ಪ್ರತಿಭಟನೆ ಮಾಡಿದ್ದಾರೆ. ಈ ವಿಚಾರದಲ್ಲಿ ಸಾಕಷ್ಟು ಚರ್ಚೆ ಆ ಸದನದಲ್ಲಿ ಆಗಿದೆ. ಆದರೆ 'ತೋರಿಸಲೆ ಪೋಲೀಸ್ ರಾಜ್ಯದ ರುಚಿಯನ್ನು ?' ಎನ್ನುವುದನ್ನು ಬರೇ ವಿಧಾನ ಪರಿಷತ್ತಿಗಷ್ಟೇ ಸೀಮಿತವಾಗಿಟ್ಟುಕೊಂಡರೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರು ಈ ವಿಚಾರವನ್ನು ಗಮನಿಸಬೇಕು. ಮುಖ್ಯಮಂತ್ರಿಗಳು ಈ ಸದನಕ್ಕೂ ಕೂಡ ಜವಾಬ್ದಾರರು ಇರುವುದರಿಂದ ನಾನು ಹೇಳಬೇಕಾಗಿದೆ ಏನೆಂದರೆ, ಇದರಿಂದಾಗಿ ಮಾನಸಿಕವಾದಂತಹ ಬೆದರಿಕೆಗೆ ಅಥವಾ ತೊಂದರೆಗೀಡಾಗುವಂತಹ ಬೆದರಿಕೆಗೆ ಹೆದರಿಕೆಗೆ ಒಳಗಾಗಿ ಈ ಸದನದ ಕಾರ್ಯ

ಕಲಾಪಗಳಲ್ಲಿ ಭಾಗವಹಿಸುವುದೇ ಇರಬಹುದು, ಸದನದ ಒಳಗಡೆ ಅಥವಾ ಹೊರಗಡೆಯು ವಿಚಾರವೇ ಇರಬಹುದು ನಿರ್ಭಯವಾಗಿ ತನ್ನ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಯಾವ ಸದಸ್ಯರಿಗೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ಒಂದು ವೇಳೆ ''ಇಲ್ಲ ಸಂದರ್ಭ ಹಾಗೆ ಇತ್ತು. ಬಾಯಿತಪ್ಪಿ ಈ ಮಾತು ಬಂತು'' ಎನ್ನುವುದಾದರೆ ಆ ಪ್ರಶ್ನೆ ಬೇರೆ. ಆದರೆ ಅವರು ಒಂದು ಮಾನಸಿಕವಾದಂಥ ಮನೋ ಭೂಮಿಕೆಯನ್ನು ಸಿದ್ಧಮಾಡಿ ಈ ಮಾತನ್ನು ಹೇಳಿರತಕ್ಕಂಥ ಧಾಟಿ ಪ್ರಜಾಪ್ರಭುತ್ವದ ನೀತಿಗೆ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿರುವ ಮೌಲ್ಯಗಳಿಗೆ ಅನುಗುಣವಾಗಿ ಇದೆಯೇ ಎನ್ನುವುದು ಇಲ್ಲಿನ ಪ್ರಶ್ನೆ. ಇದು ಮುಖ್ಯಮಂತ್ರಿಗಳ ಬಾಯಿಂದ ಬಂದ ಹೇಳಿಕೆಯಲ್ಲ. ಇದನ್ನು ಯಾರೂ ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ನಮಗೆ ಇರತಕ್ಕಂಥ ಹಕ್ಕುಗಳೇನು ? ನಿರ್ಭೀತವಾಗಿ ನಾವು ಕೆಲಸ ಮಾಡಬೇಕು. ಈ ಸದನದ ಸದಸ್ಯರಿಗೆ ಅದು ಸಾಧ್ಯವಾಗುವುದಿಲ್ಲ. ಇಂತಹ ಬೆದರಿಕೆಯ ವಾತಾವರಣದಲ್ಲಿ ನಾವು ಕೆಲಸ ಮಾಡಬೇಕಾದಂಥ ಪರಿಸ್ಥಿಯಲ್ಲಿ ಮುಖ್ಯಮಂತ್ರಿಗಳು ಇದರ ಬಗ್ಗೆ ಸಂಪೂರ್ಣವಾದ ವಿವರಣೆಯನ್ನು ಕೊಡಬೇಕು. ಇಲ್ಲಿ ನಮ್ಮ ಹಕ್ಕಿಗೆ ಚ್ಯುತಿಯಾಗಿರುವುದರಿಂದ ಹಕ್ಕುಭಾದ್ಯತಾ ಸಮಿತಿಗೆ ಇದನ್ನು ಒಪ್ಪಿಸಬೇಕು. ಮತ್ತು ಇದರ ಬಗ್ಗೆ ಚರ್ಚೆ ಆಗಬೇಕು. ಯಾವ ಉದ್ದೇಶದಿಂದ ಸದನದಲ್ಲಿ ಈ ಹೇಳಿಕೆಯನ್ನು ಕೊಟ್ಟರು ? ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಆಗಬೇಕಾಗುತ್ತದೆ. ಈ ಸಭೆಯ ಮಾನ್ಯ ಸದಸ್ಯರಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿ ಈ ಸದನಕ್ಕೆ ಇರುವುದರಿಂದ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಈ ನಿರ್ಣಯವನ್ನು ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಿಕೊಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನಿಯಮಾವಳಿ ೩೧೨ರ ಪ್ರಕಾರ ಮೇಲ್ಮನೆಯಲ್ಲಿ ನಡೆದಂತಹ ಚರ್ಚೆಗಳನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಷಯಗಳನ್ನು, ಮೇಲ್ಮನೆಯಲ್ಲಿ ನಡೆದ ವಿಷಯಗಳನ್ನು ತೆಗೆದುಕೊಂಡು ಹಕ್ಕುಭಾದ್ಯತಾ ಸಮಿತಿಗೆ ಒಪ್ಪಿಸಬೇಕು ಎಂದು ಹೇಳಿ ತಾವೇನು ವಾದವನ್ನು ಮುಂಡನೆ ಮಾಡಿದ್ದೀರಿ, ನಾನು ನಮ್ಮ ನಿಯಮದ ವ್ಯಾಪ್ತಿಯನ್ನು ಆಲೋಚನೆ ಮಾಡಿ ಇದು ಹಕ್ಕು ಚ್ಯುತಿ ವ್ಯಾಪ್ತಿಯ ಒಳಗಡೆ ಬರುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗಿರುವುದರಿಂದ ಈ ವಿಷಯವನ್ನು ತಡೆಹಿಡಿದಿದ್ದೇನೆ.

(I) ಗಮನ ಸೆಳೆಯುವ ಸೂಚನೆ

ನಂಜನಗೂಡು ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ಬೆಳೆಗಳಿಗೆ ಉಂಟಾದ ಹಾವಳಿ ಬಗ್ಗೆ

ಶ್ರೀ ಎಂ. ಮಹದೇವ್ (ನಂಜನಗೂಡು).—ನಂಜನಗೂಡು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಆನೆಗಳ ಹಾವಳಿಯಿಂದ ಬೆಳೆಗಳಿಗುಂಟಾದ ನಷ್ಟದ ವಿಚಾರವನ್ನು ಅರಣ್ಯ ರಾಜ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—ನನ್ನ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ ೫-೧೨-೮೩ ರಂದು ಶ್ರೀ ಪಟೇಲ್ ಚೆನ್ನಪ್ಪ ಬೀಪೆ ಸಾರಗಪುರ, ನಂಜನಗೂಡು ಇವರಿಂದ ಕಾಡಾನೆ ತೆಂಗಿನ ತೋಟಕ್ಕೆ ನುಗ್ಗಿ ತೆಂಗಿನ ಮರಗಳನ್ನು ಹಾಳು ಮಾಡುತ್ತಿರುವುದರ ಬಗ್ಗೆ ಬಂದ ತಂತಿ ವರ್ತಮಾನ ಬಂದಮೇಲೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯ ಜೀವಿ ಸಂರಕ್ಷಣೆ ವಿಭಾಗ, ಮೈಸೂರು ಹಾಗೂ ವನ್ಯ ಪ್ರಾಣಿ ಸಂರಕ್ಷಣಾಧಿಕಾರಿ, ಮೈಸೂರು, ಅಧಿಕಾರಿಗಳು, ಸರಗೂರು ಇವರಿಗೆ ಕಾಡಾನೆಗಳನ್ನು ಆದಷ್ಟು ಜಾಗ್ರತೆ ಕಾಡಿಗೆ ಅಟ್ಟಲು ತಿಳಿಸಿದರ ಮೇರೆಗೆ ಸಹಾಯಕ ಅರಣ್ಯಾಧಿಕಾರಿ, ವನ್ಯ ಜೀವಿ ಉಪ ವಿಭಾಗ, ಮೈಸೂರು ಇವರು ಅಂದೇ ಸ್ಥಳಕ್ಕೆ ಇವರ ಸಿಬ್ಬಂದಿಯೊಂದಿಗೆ ಧಾವಿಸಿ ಆನೆಗಳನ್ನು ಕಾಡಿಗೆ ಅಟ್ಟಲು ಎಲ್ಲಾ ಏರ್ಪಾಡುಗಳನ್ನು ಮಾಡಿದ್ದಾರೆ. ಅಲ್ಲದೆ ವಲಯ ಅರಣ್ಯಾಧಿಕಾರಿ, ಅಂತರಸಂತೆ ಹಾಗೂ ಇವರ ಸಿಬ್ಬಂದಿಗೆ ಮುಂದೆ ಆನೆಗಳನ್ನು ತೋಟಕ್ಕೆ ಹಾಗೂ ಊರಿಗೆ ಪ್ರವೇಶಿಸದಂತೆ ನೋಡಿಕೊಳ್ಳಲು ಸಹಾಯ ಅರಣ್ಯಾಧಿಕಾರಿ, ವನ್ಯ ಜೀವಿ ಸಂರಕ್ಷಣೆ ವಿಭಾಗದವರು ಆದೇಶವನ್ನು ನೀಡಿ ಎಲ್ಲಾ ರೀತಿಯಿಂದಲೂ ಆನೆಗಳಿಂದ ನಷ್ಟವಾಗದಂತೆ ತಡೆಗಟ್ಟಿದ್ದಾರೆ. ಫಸಲು ಹಾಳು ಮಾಡಿದ ಬಗ್ಗೆ ಇಲ್ಲಿಯವರೆಗೂ ಯಾವ ರೀತಿಯ ವರದಿಗಳು ವಲಯ ಅರಣ್ಯಾಧಿಕಾರಿಗಳಿಂದ ಬಂದಿರುವುದಿಲ್ಲ. ವಿವರವಾದ ಮಾಹಿತಿಯನ್ನು ವಲಯ ಅರಣ್ಯಾಧಿಕಾರಿ,